**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 2157/2025 | | | |
|---|---|---|---|
| ಸಾಕ್ಷಿದಾರರ ಹೆಸರು | ಹೇಮಶ್ರೀ | | |
| ತಂದೆ: ಹೆಸರು | ಶ್ರೀನಿವಾಸ | ಪಿಡಬ್ಲೂ: | 3 |
| ವಯಸ್ಸು: | 16 ವರ್ಷ | ಸಿಡಬ್ಲೂ: | 1 |
| ಉದ್ಯೋಗ: | ವಿದ್ಯಾಭ್ಯಾಸ | | |
| ವಾಸ ಸ್ಥಳ: | ಕೊಂಡೇನಹಳ್ಳಿ ಚಿಕ್ಕಬಳ್ಳಾಪುರ ಜಿಲ್ಲೆ | | |

**ದಿನಾಂಕ: 14-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

ತಾಯಿ ಹೆಸರು ರಾಧಮ್ಮ. ಆರೋಪಿ 1, 3 ಮತ್ತು 4 ರವರ ಪರಿಚಯ ಇಲ್ಲ. 2 ನೇ ಆರೋಪಿ ನನ್ನ ತಾಯಿ. ದೂರಿನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಎಲ್ಲಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಸಹಿಯನ್ನು ನಾನು ಎಷ್ಟು ವರ್ಷಗಳ ಹಿಂದೆ ಮಾಡಿರುತ್ತೆನೆ ಎಂದು ನನಗೆ ನೆನಪಿರುವುದಿಲ್ಲ. ಅದರಲ್ಲಿ ಬರೆದಿರುವ ವಿಚಾರ ಸಹ ನನಗೆ ಗೊತ್ತಿರುವುದಿಲ್ಲ. ದೂರನ್ನು ನಿಪಿ-6 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಕೃತ್ಯ ನಡೆದ ಸ್ಥಳ ಪಂಚನಾವೆಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಾನು ಪೊಲಸ್ ಠಾಣೆಯಲ್ಲಿ ಮಾಡಿರುತೆನೆ. ಯಾವ ವಿಚಾರಕ್ಕೆ ಮಾಡಿರುತ್ತೆನೆ ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು

ಗುರುತಿಸಲಾಯಿತು. ಸಾಕ್ಷಿಗೆ ಮಾಲು ಅಮಾನತ್ತು ಪಂಚನಾವೆಯಲ್ಲಿರುವ ಸಹಿಯನ್ನು ತೋರಿಸಲಾಗಿ ಸದರಿ ಸಹಿಯನ್ನು ನಾನು 1 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ವಿಚಾರಕ್ಕೆ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಚಿಕ್ಕಬಳ್ಳಾಪುರ ಆಪ್ತ ಸಮಾಲೋಚನಾ ವರದಿಯಲ್ಲಿರುವ ಸಹಿಯನ್ನು ಸಾಕ್ಷಿ ನೊಡಿ ಗುರುತಿಸಿರುತ್ತಾರೆ. ಸದರಿ ವರದಿಯಲ್ಲಿರುವ ವಿಚಾರವೂ ಸಹ ನನಗೆ ಗೊತ್ತಿರುವುದಿಲ್ಲ. ಸದರಿ ವರದಿಯನ್ನು ನಿಪಿ–7 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–7(ಎ) ಮತ್ತು (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮೆಡಿಕಲ್ ಲೀಗಲ್ ಎಕ್ಸಾಮಿನೇಷನ್ ರಿಪೋರ್ಟ್ ನಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಾನು ಎಲ್ಲಿ ಮತ್ತು ಯಾವ ವಿಚಾರಕ್ಕೆ ಮಾಡಿರುತ್ತೆನೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದಾಖಲೆಯನ್ನು ನಿಪಿ–8 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–8(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ–**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ 1 ರಿಂದ 4 ರವರು ಅಪ್ರಾಪ್ತ ವಯಸ್ಸಿನ ಹೆಮಶ್ರೀ ರವರಿಗೆ ಆರೋಪಿಗೆ ಮದುವೆ ಮಾಡಲು ಮಾತುಕತೆ ಮಾಡಿಕೊಂಡು ದಿಃ

07.05.2025 ರಂದು ಬೆಳಿಗ್ಗೆ 5 ರಿಂದ 6 ಗಂಟೆಯವರೆಗೂ ಚಿಂತಾಮಣಿ ನಗರದ ಎನ್ ಎನ್ ಟಿ ದೇವಾಲಯದ ಹಿಂಭಾಗದಲ್ಲಿರುವ 2 ನೇ ಆರೋಪಿ ಮನೆಯ ಮುಂಭಾಗದಲ್ಲಿ 1 ನೇ ಆರೋಪಿಯು ಅಪ್ರಾಪ್ತ ವಯಸ್ಸಿನ ಹೇಮಶ್ರೀರವರಿಗೆ ತಾಳಿ ಕಟ್ಟಿ ಮದುವೆ ಮಾಡಿಕೊಂಡಿರುವುದಾಗಿ ನಿಪಿ–6 ರಂತೆ ಚಾಸಾ–1 ರವರು ದೂರು ನೀಡಿರುತ್ತೀರಾ ಎಂದರೆ ಸರಿಯಲ್ಲ.

ದಿಃ 09.05.2025 ರಂದು ಎನ್ ಎನ್ ಟಿ ಮುಂಭಾಗದಲ್ಲಿರುವ ಕೃಷ್ಣಪ್ಪ ರವರ ಮನೆಯ ಮುಂಭಾಗದಲ್ಲಿ ಚಾಸಾ–14 ರವರು ನಿಮ್ಮ ಹಾಗೂ ಚಾಸಾ–2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 12.15 ಗಂಟೆಯಿಂದ 1.15 ಗಂಟೆಯವರೆಗೂ ನಿಪಿ–1 ರಂತೆ ಪಂಚನಾಮೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಕೃತ್ಯ ನಡೆದ ಸ್ಥಳಲ್ಲಿ ತೆಗೆದಿರುವ ಛಾಯಾ ಚಿತ್ರವನ್ನು ತೋರಿಸಲಾಗಿ ಸದರಿ ಛಾಯಾ ಚಿತ್ರದಲ್ಲಿ ಚಾಸಾ–1 ರವರು ಇರುವ ಬಗ್ಗೆ ನ್ಯಾಯಾಲಯದಲ್ಲಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿಪಿ–9 ಎಂದು ಗುರುತಿಸಲಾಯಿತು.

ದಿನಾಂಕಃ 09.05.2025 ರಂದು ಚಿಂತಾಮಣಿ ಪೊಲೀಸ್ ಠಾಣೆಯ ಗಣಕಯದಂತ್ರದ ಕೊಠಡಿಯಲ್ಲಿ ಚಾಸಾ–14 ರವರು ಚಾಸಾ–1 ಮತ್ತು ಚಾಸಾ–2 ಮತ್ತು ಚಾಸಾ–3 ರವರ ಸಮಕ್ಷಮ ನಿಪಿ–2 ರಂತೆ ಪಂಚನಾವೆಯನ್ನು ಮದ್ಯಾಹ್ನ 2.30 ರಿಂದ 3.15 ಗಂಟೆಯವರೆಗೂ ಪಂಚನಾಮೆಯನ್ನು ತಯಾರಿಸಿ ಚಾಸಾ–1 ರವರು ಹಾಜರು ಪಡಿಸಿರುವಂತಹ 1 ತಾಳಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ–3 ರಲ್ಲಿರುವ ಭಾವಚಿತ್ರವನ್ನು ಹಾಗೂ ಅಮಾನತ್ತು ಪಡಿಸಿಕೊಂಡಿರುವ ಮಾಂಗಲ್ಯವನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ದಿನಾಂಕಃ 07.05.2025 ರಂದು ಮಕ್ಕಳ ಮತ್ತು ಅಭಿವೃದ್ಧಿ ಇಲಾಖೆಯಲ್ಲಿ ನೀವು ನೀಡಿರುವಂತಹ ಸ್ವ-ಇಚ್ಛಾ ಹೇಳಿಕೆಯನ್ನು ಓದಿ ಹೇಳಿದ ನಂತರ ತಮ್ಮ ಸಹಿ ಹಾಗೂ ಹೆಬ್ಬಟ್ಟನ್ನು ಹಾಕಿರುತ್ತೀರಾ ಎಂದರೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ದಿನಾಂಕಃ 09.05.2025 ರಂದು ಹಾಗೂ ದಿಃ 15.05.2025 ರಂದು 7 ದಿನಗಳ ನಿಪಿ-8 ರಂತೆ ಚಿಂತಾಮಣಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಪರೀಕ್ಷೆಗೆ ಒಪ್ಪಿರುವ ಬಗ್ಗೆ ನಿಪಿ-8 ರ ಫಾರಂ ನಲ್ಲಿ ಸಹಿ ಮಾಡಿರುತ್ತೀರಾ ಎಂದರೆ ಯಾವ ವಿಚಾರಕ್ಕೆ ಸಹಿ ಮಾಡಿರುತ್ತೆನೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ. ಬಿ ಜೆ ಆರ್ ಆರೋಪಿ ಪರ ವಕೀಲರಿಂದಃ-</u>**

ನೀವು ಸಹಿ ಮಾಡುವ ಕಾಲಕ್ಕೆ ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೀರಾ ಎಂದರೆ ಹೌದು. ಮಾಲು ಅಮಾನತ್ತು ಪಂಚನಾಮೆಯಲ್ಲಿರುವ ಖಾಲಿ ಹಾಳೆ ಮೆಲೆ ಸಹಿ ಮಾಡಿರುತ್ತೀರಾ ಎಂದರೆ ಹೌದು. ನಿಪಿ-7 ಮತ್ತ 8 ರಲ್ಲೂ ಸಹ ಸಹಿ ಮಾಡುವ ಕಾಲಕ್ಕೆ ಖಾಲಿ ಇತ್ತು ಎಂದರೆ ಹೌದು. ನಿಪಿ-3 ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಗೊತ್ತಿಲ್ಲ. ಅದರಂತೆ ತಾಳಿ ಯಾರದ್ದು ಎಂದು ಗೊತ್ತಿಲ್ಲ ಎಂದರೆ ಗೊತ್ತಿಲ್ಲ. ನಿಮ್ಮ ತಾಯಿಗೆ ಹೃದಯ ಸಂಬಂಧಿ ಯಾವುದೇ ಖಾಯಿಲೆ ಇಲ್ಲ ಆರಾಮವಾಗಿ ಇದ್ದಾರೆ ಎಂದರೆ ಹೌದು.

**<u>ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ-</u>**

ಕನ್ನಡ ಓದಲು ಬರೆಯಲು ಬರುತ್ತದಾ ಎಂದರೆ ಬರುತ್ತದೆ. ಖಾಲಿ ಹಾಳೆಯನ್ನು ಯಾರಾದರೂ ಕೊಟ್ಟರೆ ಸಹಿ ಮಾಡುತ್ತಿರಾ ಎಂದರೆ ಪೊಲಿಸರನ್ನು ನೋಡಿ ಭಯ ಆಗಿರುತ್ತದೆ

ಅದಕ್ಕೆ ಸಹಿ ಮಾಡಿರುತ್ತೆನೆ. ಡಾಕ್ಟರ್ ಹೇಳಿದರೆ ನಿಮಗೆ ಅರ್ಥ ಆಗುತ್ತದೆ ಅವರು ಹೇಳಿದ ನಂತರವೇ ನೀವು ಮಾಡುತ್ತೀರಿ ಎಂದರೆ ಸಾಕ್ಷಿ ಅವರು ಏನು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಅವರು ಸಹಿ ಮಾಡು ಎಂದಿದ್ದಕ್ಕೆ ಮಾಡಿರುತ್ತೆನೆ. ನಿಪಿ–7 ಮತ್ತು 8 ಖಾಲಿ ಹಾಳೆ ಇರಲಿಲ್ಲ ಅದರಲ್ಲಿ ಇರುವ ವಿಚಾರ ಗೊತ್ತಿರುತ್ತದೆ, ಗೊತ್ತಿದ್ದೆ ಸಹಿ ಮಾಡಿರುತ್ತೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.